# ಅಧ್ಯಾಯ-3
# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

## [ಪ್ರಕರಣ 4(1) (ಬಿ) (iii)]

| | ಚಟುವಟಿಕೆ | ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆ | ಅಂತಿಮ ತೀರ್ಮಾನ ಕೈಗೊಳ್ಳುವ ಪ್ರಾಧಿಕಾರದ ಪದನಾಮ |
|---|---|---|---|
| 1 | ಮಾನವ ಹಕ್ಕುಗಳ ಉಲ್ಲಂಘನೆ ಕುರಿತು ಸಾರ್ವಜನಿಕರಿಂದ ಸ್ವೀಕರಿಸಿದ ದೂರುಗಳು ಅಥವಾ ಆಯೋಗವೇ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲು ಮಾಡಿಕೊಂಡ ದೂರುಗಳನ್ನು ಪರಿಶೀಲಿಸುವುದು. | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ (ಕಾರ್ಯವಿಧಾನ) ವಿನಿಯಮಗಳು 2007ರ ಮೇರೆಗೆ ದೂರುಗಳನ್ನು ಇತ್ಯರ್ಥಪಡಿಸಲಾಗುತ್ತಿದೆ. | ಆಯೋಗದಲ್ಲಿ ದೂರುಗಳನ್ನು ವಿಚಾರಿಸಲು ಮಾನ್ಯ ಅಧ್ಯಕ್ಷರು ಮತ್ತು ಇಬ್ಬರು ಮಾನ್ಯ ಸದಸ್ಯರು ಸೇರಿದಂತೆ ಒಟ್ಟು 03 ಪೀಠಗಳಿದ್ದು, ಅದರಲ್ಲಿ ಗೌರವಾನ್ವಿತ ಶ್ರೀ ಧೀರೇಂದ್ರ ಹೆಚ್. ವಘೇಲಾ ಇವರು, ಆಯೋಗದ ಮಾನ್ಯ ಅಧ್ಯಕ್ಷರು ಮತ್ತು ಶ್ರೀ ಕೆ.ಬಿ.ಚಂಗಪ್ಪ ಇವರು ಮಾನ್ಯ ಸದಸ್ಯರು ಮತ್ತು ಶ್ರೀ ಆರ್.ಕೆ.ದತ್ತ ಇವರು ಮಾನ್ಯ ಸದಸ್ಯರು ಇವರುಗಳು ಪೀಠಾಸೀನ ಅಧಿಕಾರಿಯಾಗಿರುತ್ತಾರೆ. |

**ಕಾರ್ಯದರ್ಶಿ:**

ರಾಜ್ಯ ಸರ್ಕಾರದ ಕಾರ್ಯದರ್ಶಿ ಮಟ್ಟದ ಹುದ್ದೆಯ ತತ್ಸಮಾನ ಹುದ್ದೆಯಲ್ಲಿ ಕಾರ್ಯದರ್ಶಿಯವರ ನೇಮಕವಾಗಿದ್ದು, ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಆಯೋಗವು ವಹಿಸಿಕೊಡಬಹುದಾದಂತಹ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವುದು. ಇವರ ಅಧೀನದಲ್ಲಿ ಅವಶ್ಯವಿರುವ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಆಯೋಗದ ಆದೇಶಾನುಸಾರ ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

**ವಿಲೇಖನಾಧಿಕಾರಿಗಳು:**

ಆಯೋಗದ ಕಾನೂನು ವಿಭಾಗದ ಮುಖ್ಯಸ್ಥರಾಗಿದ್ದು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಕಾರ್ಯವಿಧಾನ) ವಿನಿಯಮಗಳು-2007ರಡಿ ತನ್ನ ಕಾರ್ಯ ನಿರ್ವಹಿಸುವುದು, ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂದಿಸಿದಂತೆ ಸ್ವೀಕರಿಸಿದ ದೂರುಗಳನ್ನು ಪರಿಶೀಲಿಸಿ ಸಂಬಂದಪಟ್ಟ ನ್ಯಾಯಪೀಠಗಳ ಮುಂದೆ ಮಂಡಿಸುವ ಕಾರ್ಯನಿರ್ವಹಿಸುವುದು.

**ಅಪರ ವಿಲೇಖನಾಧಿಕಾರಿಗಳು:**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಕಾರ್ಯವಿಧಾನ) ವಿನಿಯಮಗಳು-2007ರಡಿ ತನ್ನ ಕಾರ್ಯ ನಿರ್ವಹಿಸುವುದು, ಮಾನವನ ಹಕ್ಕುಗಳ ಉಲ್ಲಂಘನೆಗೆ ಸಂಬಂದಿಸಿದಂತೆ ಸ್ವೀಕರಿಸಿದ ದೂರುಗಳನ್ನು ಪರಿಶೀಲಿಸಿ ಸಂಬಂದಪಟ್ಟ ನ್ಯಾಯಪೀಠಗಳ ಮುಂದೆ ಮಂಡಿಸುವ ಕಾರ್ಯನಿರ್ವಹಿಸುವುದು.

**ಆರಕ್ಷಕ ಮಹಾನಿರೀಕ್ಷಕರು:**

ಇವರು ತನಿಖಾ ವಿಭಾಗದ ಮುಖ್ಯಸ್ಥರಾಗಿದ್ದು, ಆಯೋಗದ ಸೂಚನೆ ಅನುಸಾರ ತನಿಖಾ ವಿಭಾಗದ ಪ್ರಕಾರ್ಯಗಳನ್ನು ಅನುಷ್ಠಾನಗೊಳಿಸುವುದು. ಇವರ ಅಧೀನದಲ್ಲಿ ತನಿಖಾ ತಂಡದ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.